ಲಾಲ್‌ಬಾಗ್‌ನಲ್ಲಿ ಸಂಗೀತ ನೃತ್ಯಕಾರಂಜಿ

209(127) ಶ್ರೀ ರಾಮಲಿಂಗಾ ರೆಡ್ಡಿ:(ಬಿ.ಟಿ.ಎಂ.ಲೇಔಟ್) ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಲ್‌ಬಾಗ್‌ನಲ್ಲಿ ಸಂಗೀತ ನೃತ್ಯ ಕಾರಂಜಿ, ಬೋಟಿಂಗ್ ಇತ್ಯಾದಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಉದ್ದೇಶಿಸಿರುವುದೇ;

ಆ) ಹಾಗಿದ್ದಲ್ಲಿ, ಈ ಯೋಜನೆಗಳ ಅಂದಾಜು ವೆಚ್ಚವೆಷ್ಟು;

ಇ) ಇಲ್ಲಿರುವ ಏಕಶಿಲಾ ಬಂಡೆಗೆ ಧಕ್ಕೆಯುಂಟು ಮಾಡುವ ಕ್ರಮಕ್ಕೆ ಹಾಗೂ ಇದನ್ನು ಮತ್ತೊಂದು ವಂಡರ್ ಲಾ ಮಾಡಲು ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇರತಕ್ಕ ಪರಿಸರವನ್ನು ಸಂರಕ್ಷಿಸಿ, ಉದ್ಯಾನವನ್ನು ಸುಚಿಗೊಳಿಸಿ ಹೆಚ್ಚು ಪಹರೆಯನ್ನು ನಿಯೋಜಿಸಿ, ಹೊಸದಾಗಿ ಗಿಡಗಳನ್ನು ನೆಡುವ ಕಾಮಗಾರಿಯನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಉಮೇಶ್ ವಿ. ಕತ್ತಿ(ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) ಸಂಗೀತ ನೃತ್ಯ ಕ್ಯಾರಂಜಿ ನಿರ್ಮಿಸುವ ಸಂಬಂಧ ಎಲಾ ಅಸಕ್ತ ಚಿಂತಕರ ಅಭಿಪ್ರಾಯ ಆಧರಿಸಿ ಅನುಷ್ಠಾನಗೊಳಿಸುವ ಬಗ್ಗೆ ಇನ್ನೂ ನಿರ್ಧರಿಸಬೇಕಾಗಿದೆ. ಬೋಟಿಂಗ್ ಕಾರ್ಯಕ್ರಮ ಕೈಗೊಳ್ಳುವ ಪ್ರಸ್ತಾವಣೆ ಇರುವುದಿಲ್ಲ.

ಆ) ಅಂತಿಮ ನಿರ್ಧಾರದ ನಂತರ ತಯಾರಿಸಲಾಗುವುದು.

ಇ)ಹೌದು.

ಆದರೆ ಇಲ್ಲಿರುವ ಏಕಶಿಲಾ ಬಂಡೆಗೆ ಧಕ್ಕೆಯನ್ನುಂಟು ಮಾಡುವ ಹಾಗೂ ವಂಡರ್‌ಲಾ ಮಾಡುವ ಯಾವುದೇ ಉದ್ದೇಶವು ಇರುವುದಿಲ್ಲ.

ಈ) ಹೌದು.

ವಿಚಾರಣಾಧೀನ ಕೈದಿಗಳು

210(406) ಶ್ರೀ ರೇವಣ್ಣ ಹೆಚ್ ಡಿ:(ಹೊಳೇನರಸೀಪುರ) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?